ಇ) ರಾಜ್ಯದಲ್ಲಿ ಕಳೆದ ಎರಡು ವರ್ಷಗಳಲ್ಲಿ ಎಷ್ಟು ಜನರಿಗೆ ಮನೆ ಕಟ್ಟಿಕೊಳ್ಳಲು ಅನುದಾನ ಒದಗಿಸಲಾಗಿದೆ?

ಶ್ರೀ ಗೋವಿಂದ ಎಂ. ಕಾರಜೋಳ (ಮಾನ್ಯ ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು)

ಅ) ಹಿಂದಿನ ಎರಡು ವರ್ಷಗಳಲ್ಲಿ ಒಟ್ಟು 3,353 ಫಲಾನುಭವಿಗಳನ್ನಾಗಿ ಗುರುತಿಸಿದೆ.

1) 2008–09ನೇ ಸಾಲಿಗೆ 1066

2) 2009–10ನೇ ಸಾಲಿಗೆ 2287

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 2010–11ನೇ ಸಾಲಿಗೆ ಗುರುತಿಸಿರುವ ತಾಲ್ಲೂಕುವಾರು ಫಲಾನುಭವಿಗಳ ಸಂಖ್ಯೆ ಇಂತಿದೆ.

1) ಮಂಗಳೂರು : 56

2) ಬೆಳ್ತಂಗಡಿ : 01

3) ಬಂಟ್ವಾಳ : 03

4) ಪುತ್ತೂರು : 0

5) ಸುಳ್ಯ : 0

ಒಟ್ಟು : 60

ಇ) 2008–09 – 1066 ಜನರಿಗೆ

2009–10 – 2287 ಜನರಿಗೆ

ಒಟ್ಟು – 3353

ಕೈಲಾಸ ಮಾನಸ ಸರೋವರಯಾತ್ರೆಗೆ ಸಹಾಯಧನ

106(163) ವಸಂತಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಉನ್ನತ ಶಿಕ್ಷಣ, ಯೋಜನೆ, ಸಾಂಖ್ಯಿಕ, ಮುಜರಾಯಿ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕದಿಂದ ಕೈಲಾಸ ಮಾನಸ ಸರೋವರ ಯಾತ್ರೆ ಕೈಗೊಳ್ಳುವ ಯಾತ್ರಿಗಳಿಗೆ ಸರಕಾರದ ವತಿಯಿಂದ ಎಷ್ಟು ಸಹಾಯಧನ ನೀಡಲಾಗುತ್ತಿದೆ;

ಆ) ರಾಜ್ಯದಲ್ಲಿ ಕಳೆದ ಎರಡು ವರ್ಷಗಳಲ್ಲಿ ಸರ್ಕಾರದಿಂದ ಸಹಾಯಧನ ಪಡೆಯಲಾಗಿರುವ ಯಾತ್ರಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು);

ಇ) ಸಹಾಯಧನ ಪಡೆಯಲು ಇರುವ ಮಾನದಂಡಗಳೇನು?

ಡಾ: ವಿ.ಎಸ್. ಆಚಾರ್ಯ (ಉನ್ನತ ಶಿಕ್ಷಣ, ಯೋಜನೆ, ಸಾಂಖ್ಯಿಕ, ಮುಜರಾಯಿ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು)

ಅ) ಕರ್ನಾಟಕದಿಂದ ಕೈಲಾಸ ಮಾನಸ ಸರೋವರ ಯಾತ್ರೆ ಕೈಗೊಂಡ ಯಾತ್ರಿಕರಿಗೆ ಸರ್ಕಾರದ ಸಹಾಯಧನ ನೀಡುವ ಯೋಜನೆಯನ್ನು 2006–07ನೇ ಸಾಲಿನಿಂದ ಜಾರಿಗೆ ತರಲಾಗಿದೆ. ಸದರಿ ಯೋಜನೆಯಡಿ ರೂ. 25,000/– ಧನ ಸಹಾಯ ನೀಡಲಾಗುತ್ತಿದ್ದು, 2010ನೇ ಸಾಲಿನಿಂದ ಈ ಸಹಾಯಾನುದಾನವನ್ನು ರೂ. 30,000/–ಕ್ಕೆ ಹೆಚ್ಚಿಸಲಾಗಿದೆ.

ಆ) ಕಳೆದ ಎರಡು ವರ್ಷಗಳಲ್ಲಿ 814 ಯಾತ್ರಾರ್ಥಿಗಳಿಗೆ ಸಹಾಯಧನ ನೀಡಲಾಗಿದೆ. (ಜಿಲ್ಲಾವಾರು ವಿವರ ಅನುಬಂಧ–1ರಲ್ಲಿ ಸಲ್ಲಿಸಿದೆ)

ಇ) ಯಾತ್ರೆಯ ಸಹಾಯಧನ ಪಡೆಯಲು ಸರ್ಕಾರದ ಆದೇಶ ಸಂಖ್ಯೆ: ಕಂಇ 01 ಮುಅಬಿ 2006, ದಿನಾಂಕ 3–6–2006ರ ಮಾರ್ಗಸೂಚಿಯಲ್ಲಿ ಮಾನದಂಡಗಳನ್ನು ತಿಳಿಸಲಾಗಿದೆ.

ಅನುಬಂಧ

ಕಳೆದ ಎರಡು ವರ್ಷಗಳಲ್ಲಿ ಕೈಲಾಸ ಮಾನಸ ಸರೋವರ ಯಾತ್ರೆ ಕೈಗೊಂಡ ಫಲಾನುಭವಿಗಳ ಜಿಲ್ಲಾವಾರು ವಿವರ

ಕ್ರ ಸಂ.	ಜಿಲ್ಲೆಯ ಹೆಸರು	2008–09	2009–10
1	2	3	4
1	ಬೆಂಗಳೂರು ನಗರ	160	458
2	ಬೆಂಗಳೂರು ಗ್ರಾಮಾಂತರ	–	–
3	ಬಾಗಲಕೋಟೆ	2	2

1	2	3	4
4	ಬೆಳಗಾವಿ	–	1
5	ಬಳ್ಳಾರಿ	–	26
6	ಬೀದರ್	–	2
7	ಬಿಜಾಪುರ	–	–
8	ಚಾಮರಾಜನಗರ	–	–
9	ಚಿಕ್ಕಮಗಳೂರು	–	4
10	ಚಿತ್ರದುರ್ಗ	4	1
11	ಚಿಕ್ಕಬಳ್ಳಾಪುರ	–	5
12	ದಾವಣಗೆರೆ	–	3
13	ದಕ್ಷಿಣ ಕನ್ನಡ	3	29
14	ಧಾರವಾಡ	8	1
15	ಗದಗ	–	–
16	ಗುಲ್ಬರ್ಗಾ	1	2
17	ಹಾಸನ	–	–
18	ಹಾವೇರಿ	–	–
19	ಕೊಡಗು	–	3
20	ಕೋಲಾರ	2	9
21	ಕೊಪ್ಪಳ	3	5
22	ಮಂಡ್ಯ	2	2
23	ಮೈಸೂರು	22	17
24	ರಾಯಚೂರು	1	4

1	2	3	4
25	ರಾಮನಗರ	–	–
26	ಶಿವಮೊಗ್ಗ	4	5
27	ತುಮಕೂರು	3	2
28	ಉಡುಪಿ	–	11
29	ಉತ್ತರ ಕನ್ನಡ	–	7
30	ಯಾದಗಿರಿ	–	–
	ಒಟ್ಟು	215	599

ಬೆಳ್ತಂಗಡಿಯಲ್ಲಿರುವ ಜಮಲಾಬಾದ್ ಕೋಟೆ ಏರಲು ವಿಧಿಸಿರುವ ಶುಲ್ಕ

107(164) ಶ್ರೀ ವಸಂಗಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳ್ತಂಗಡಿಯಲ್ಲಿರುವ ಗಡಾಯಿಕಲ್ಲು (ಜಮಲಾಬಾದ್) ಕೋಟೆ ಹತ್ತುವ ಮಕ್ಕಳಿಗೆ 20/– ರೂ. ವಯಸ್ಕರಿಗೆ 40/– ರೂ. ಇದ್ದ ಶುಲ್ಕವನ್ನು ಏಕಾಏಕಿ 5 ಪಟ್ಟು ಹೆಚ್ಚಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ;

ಆ) ಹಾಗಿದ್ದಲ್ಲಿ, ಶುಲ್ಕ ಏರಿಕೆಯನ್ನು ಯಾವ ಆಧಾರದ ಮೇಲೆ ಮಾಡಲಾಗಿದೆ;

ಇ) ಪ್ರವಾಸಿಗರಿಗೆ ಯಾವ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿದೆ;

ಈ) ಶುಲ್ಕವನ್ನು ಅವೈಜ್ಞಾನಿಕವಾಗಿ ಹೆಚ್ಚಿಸಿರುವುದರಿಂದ ಇಲ್ಲಿಗೆ ಬರುವ ಪ್ರವಾಸಿಗರ ಸಂಖ್ಯೆ ಇಳಿಮುಖವಾಗಬಹುದೆಂಬ ಕಲ್ಪನೆ ಸರ್ಕಾರಕ್ಕೆ ಇದೆಯೇ;

ಉ) ಮೂಲಭೂತ ಸೌಕರ್ಯಗಳಿಲ್ಲದ, ಚಾರಣಿಗರಿಗೆ ಬಹುಪ್ರಿಯವಾದ ಈ ಕೋಟೆಯನ್ನು ಉಚಿತವಾಗಿ ಹತ್ತಲು ಅವಕಾಶ ನೀಡಿದಲ್ಲಿ ಸರ್ಕಾರಕ್ಕೆ ಉಂಟಾಗುವ ತೊಂದರೆಗಳೇನು?

ಶ್ರೀ ಸಿ.ಹೆಚ್. ವಿಜಯಶಂಕರ್ (ಅರಣ್ಯ ಸಚಿವರು)

ಅ) ಹೌದು.